**ಕರ್ನಾಟಕ ಸರ್ಕಾರ**
**(ಪಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ**<br>**(ಆರ್.ಪಿ.ಸಂಖ್ಯೆ 57)**<br>**ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ :140/2015**

**ಫ್ರಾಸಾ- 32 ಚಾಸಾ- 55**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಪಿ ಎಸ್ ವಸ್ತ್ರ |
| ತಂದೆಯ ಹೆಸರುಃ | : | ಶರಣಯ್ಯ ವಸ್ತ್ರ |
| ವಯಸ್ಸುಃ | : | 69 ವರ್ಷ |
| ಉದ್ಯೋಗಃ | : | ನಿವೃತ್ತ ನಾಗರಿಕ ಸೇವೆಗಳು |
| ವಾಸ | : | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 04-10-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 5-9-2014 ರಿಂದ 20-08-2016ರವರೆಗೆ ನಾನು ಬೆಂಗಳೂರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಆಯುಕ್ತನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿಃ 30-5-15ರಂದು ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇದರ ಪೊಲೀಸ್ ಮಹಾನಿರೀಕ್ಷಕರು ಪತ್ರಬರೆದು ಹಾಸನ ಸರ್ಕಾರಿ ಆಸ್ಪತ್ರೆಯ ಕಛೇರಿ ಅಧೀಕ್ಷಕರಾಗಿದ್ದ ಸಿಆರ್ ಮಂಜುನಾಥ್ ರವರ ಮೇಲೆ ಅಭಿಯೋಜನೆ ನಡೆಸಲು ಅಭಿಯೋಜನಾ ಮಂಜೂರಾತಿ ನೀಡಲು ಕೋರಿಕೊಂಡಿದ್ದರು. ಅದರ ಜೊತೆಗೆ ಪ್ರ.ವ.ವ, ಶೋಧನಾ ಮಹಜರು, ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳ ಪ್ರತಿಗಳನ್ನು ಕಳುಹಿಸಿದ್ದರು. ಸದರಿ ಆಪಾದಿತ ನೌಕರರು ಅವರ ಆದಾಯಕ್ಕಿಂತ ಹೆಚ್ಚಿನ ಆಸ್ತಿಯನ್ನು ಹೊಂದಿದ್ದಾರೆಂದು ನನಗೆ ಮನವರಿಕೆಯಾಗಿದ್ದುದರಿಂದ ಮಂಜೂರಾತಿ ಆದೇಶವನ್ನು ದಿನಾಂಕ 16-7-2015 ರಂದು ಈಗ ನೋಡುತ್ತಿರುವ ದಾಖಲೆಯಂತೆ ನೀಡಿರುತ್ತೇನೆ.

ಅದನ್ನು ನಿಪಿ-159 ಎಂದು ಸಾಕ್ಷಿಯ ರುಜುವನ್ನು ನಿಪಿ-159(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ** ಶ್ರೀ ಸಿ ಎನ್ ವಿ **ವಕೀಲರಿಂದಃ**

ನನಗೆ ಮನವಿ ಪತ್ರದೊಂದಿಗೆ ಕಳುಹಿಸಿದ ದಾಖಲೆಗಳೊಂದಿಗೆ ಆರೋಪಿತರು ನೀಡಿರುವ 1 ರಿಂದ 23ರ ಸ್ಟೇಟ್ಮೆಂಟ್ ದಾಖಲಾತಿಗಳನ್ನು ಕಳುಹಿಸಿದ್ದಾರಾ ಎಂದರೆ ಈಗ ನನಗೆ ನೆನಪಿಲ್ಲ. ಅಭಿಯೋಜನಾ ಮಂಜೂರಾತಿ ನೀಡುವುದಕ್ಕಿಂತ ಮೊದಲು ಆರೋಪಿತರು ತನಿಖಾ ಕಾಲದಲ್ಲಿ ಸಲ್ಲಿಸಿರುವ ಸ್ಟೇಟ್ಮೆಂಟ್ ದಾಖಲೆಗಳನ್ನು ಕೂಡ ಪರಿಶೀಲಿಸಿ ತೀರ್ಮಾನಕ್ಕೆ ಬರಬೇಕು ಎಂದರೆ ಸರಿ. ಆ ದಾಖಲೆಗಳನ್ನು ಪಶೀಲಿಸಿದಾಗ ಆಪಾದಿತ ನೌಕರರು ಆದಾಯಕ್ಕಿಂತ ಜಾಸ್ತಿ ಆಸ್ತಿಯನ್ನು ಹೊಂದಿಲ್ಲ, ಅವರ ಹೇಳಿಕೆ ದಾಖಲಾತಿಗಳಲ್ಲಿ ಕಂಡುಬಂದಲ್ಲಿ ಅಭಿಯೋಜನಾ ಮಂಜೂರಾತಿ ನೀಡುವುದಿಲ್ಲ ಎಂದರೆ ನಿಜ. ನಿಪಿ-159ರಲ್ಲಿ ಆಪಾದಿತರು ಕಳುಹಿಸಿರುವ 1 ರಿಂದ 23 ರ ಸ್ಟೇಟ್ಮೆಂಟ್ ದಾಖಲಾತಿಗಳ ಬಗ್ಗೆ ನಮೂದನೆ ಇಲ್ಲ. ಒಂದುವೇಳೆ ಆ ದಾಖಲಾತಿಗಳನ್ನು ನನಗೆ ಕಳುಹಿಸಿದ್ದಲ್ಲಿ ಮತ್ತು ನಾನು ಅದನ್ನು ಪರಿಶೀಲಿಸಿದ್ದಲ್ಲಿ ಆ ಬಗ್ಗೆ ನಾನು ನನ್ನ ಮಂಜೂರಾತಿ ಆದೇಶದಲ್ಲಿ ನಮೂದಿಸುತ್ತಿದ್ದೆ ಎಂದರೆ ನಿಜ. ನಾನು ಸರಿಯಾಗಿ ಪರಿಶೀಲನೆ ಮಾಡದೆ ಲೋಕಾಯುಕ್ತ ಪೊಲೀಸರ ಕೋರಿಕೆ ಮೇರೆಗೆ ನಿಪಿ-159ನ್ನು ನೀಡಿರುವುದು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**